# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583105

ಕುಲಸಚಿವರು (ಮೌಲ್ಯಮಾಪನ) ದೂರವಾಣಿ: 08392-241011


ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ಸ್ನಾ.ಕೋ/ಪರೀಕ್ಷಾಅಧಿಸೂಚನೆ/2019-20/ 2197 ದಿನಾಂಕ:20/11/2019

## ಪರೀಕ್ಷಾ ಅಧಿಸೂಚನೆ

**ವಿಷಯ:** ನವೆಂಬರ್/ಡಿಸೆಂಬರ್-2019ರ ತಿಂಗಳಿನಲ್ಲಿ ಜರುಗಲಿರುವ ಸ್ನಾತಕೋತ್ತರ ಪದವಿಯ 1ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಪರೀಕ್ಷಾ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21-10-2019

*****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ನವೆಂಬರ್/ಡಿಸೆಂಬರ್-2019ರ ತಿಂಗಳಿನಲ್ಲಿ ಜರುಗಲಿರುವ ಸ್ನಾತಕೋತ್ತರ ಪದವಿಯ (1ನೇ ಸೆಮಿಸ್ಟರ್ ರೆಗ್ಯೂಲರ್) ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ, ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಈ ಕೆಳಗಿನಂತಿವೆ.

ಪರೀಕ್ಷೆ ತೆಗೆದುಕೊಳ್ಳಲು, ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಮಹಾವಿದ್ಯಾಲಯ/ವಿಭಾಗಗಳ ಪ್ರಾಂಶುಪಾಲರು/ಮುಖ್ಯಸ್ಥರು/ಸಂಯೋಜಕರ ಮೂಲಕ ಕುಲಸಚಿವರು (ಮೌಲ್ಯಮಾಪನ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

| ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ನಿಗದಿಪಡಿಸಿದ ದಿನಾಂಕಗಳು | | |
|---|---|---|
| 01 | ದಂಡ ಶುಲ್ಕವಿಲ್ಲದೆ | 20-11-2019 ರಿಂದ 27-11-2019 |
| 03 | ದಂಡ ಶುಲ್ಕ ಪ್ರತಿ ದಿನಕ್ಕೆ ರೂ.500/- ರಂತೆ | 28-11-2019 ರಿಂದ 30-11-2019 |

### ಪರೀಕ್ಷಾ ಶುಲ್ಕದ ವಿವರಗಳು

| ಕ್ರ.ಸಂ | ವಿವರಣೆ | ಪ್ರತಿ ಸೆಮಿಸ್ಟರ್ ರೆಗ್ಯೂಲರ್/ರಿಪಿಟರ್‌ನ ಎಲ್ಲಾ ಪರೀಕ್ಷೆಗಳಿಗೆ |
|---|---|---|
| 01 | **ಎಂ ಎ : (M.A)** ಕನ್ನಡ/ಇಂಗ್ಲಿಷ್/ಅರ್ಥಶಾಸ್ತ್ರ/ಸಮಾಜಶಾಸ್ತ್ರ/ರಾಜ್ಯಶಾಸ್ತ್ರ/ಇತಿಹಾಸ ಮತ್ತು ಪುರಾತತ್ವಶಾಸ್ತ್ರ /ಸಮಾಜಕಾರ್ಯ/ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ/ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ/ನಾಟಕ ವಿಭಾಗ/ಅಪರಾಧ ಶಾಸ್ತ್ರ/ಕಲಾ ವಿಷಯಗಳಿಗೆ ಸಂಬಂಧಿಸಿದ ಇತರೆ ಕೋರ್ಸ್‌ಗಳು. | ರೂ. 902/- |
| 02 | **ಎಲ್ ಎಲ್ ಎಂ (ಕಾನೂನು ಶಾಸ್ತ್ರ) (LLM)** | ರೂ. 902/- |
| 03 | ಎಂಕಾಂ / ಎಂ.ಬಿ.ಎ (ಸಾಮಾನ್ಯ) /ಎಂ.ಬಿ.ಎ (ಇಂಟಿಗ್ರೇಟೆಡ್) ಹಾಗೂ ವಾಣಿಜ್ಯ ವಿಷಯಗಳಿಗೆ ಸಂಬಂಧಿಸಿದ ಇತರೆ ಕೋರ್ಸ್‌ಗಳು M.com / M.B.A / M.B.A (Integrated) | ರೂ. 902/- |
| 04 | **ಎಂ.ಎಸ್ಸಿ : (M.Sc)** ರಾಸಾಯನಶಾಸ್ತ್ರ/ಔದ್ಯೋಗಿಕ ರಾಸಾಯನಶಾಸ್ತ್ರ/ಗಣಿತಶಾಸ್ತ್ರ/ಗಣಕ ವಿಜ್ಞಾನ/ ಜೈವಿಕ ತಂತ್ರಜ್ಞಾ. ಭೌತಶಾಸ್ತ್ರ/ಪ್ರಾಣಿಶಾಸ್ತ್ರ/ಸಸ್ಯಶಾಸ್ತ್ರ/ಅನ್ವಯಿಕ ಭೂ ವಿಜ್ಞಾನ/ ಪರಿಸರ ವಿಜ್ಞಾನ ಶಾಸ್ತ್ರ/ ವಿಶ್ಲೇಷಣಾ ಸೂಕ್ಷ್ಮ ಜೀವವಿಜ್ಞಾನ ಹಾಗೂ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಇತರೆ ಕೋರ್ಸ್‌ಗಳು. | ರೂ. 1,045/- |
| 05 | **ಎಮ್.ಎಡ್ /ಎಮ್.ಪಿ.ಎಡ್ : (M.Ed,M.P.Ed)** | ರೂ. 1,045/- |
| 06 | **ಎಮ್‌ಟೆಕ್-ಖನಿಜ ಸಂಸ್ಕರಣ : (M.Tech- Mineral Processing )** | ರೂ. 1,391/- |
| 07 | **ಎಂ.ಬಿ.ಎ (ಸಾಮಾನ್ಯ)** M.B.A (General) | ರೂ. 902/- |
| 08 | **P.G Diploma Course : (One Year)** ತೆರಿಗೆ ನಿರ್ವಹಣಾ ಶಾಸ್ತ್ರ/ಅನ್ವಯಿಕ ಗಣಿತಶಾಸ್ತ್ರ/ಗ್ರಾಮೀಣಾಭಿವೃದ್ಧಿ ಶಾಸ್ತ್ರ/ ಅನ್ವಯಿಕ ಅರ್ಥಶಾಸ್ತ್ರ/ ಬುಡಕಟ್ಟು ಅಧ್ಯಯನ/ಫೈರ್ ಅಂಡ್ ಇಂಡಸ್ಟ್ರಿಯಲ್ ಸೇಫ್ಟಿ/ ಸೋಲಾರ್ ರಿನ್ಯೂಬಲ್ ಎನರ್ಜಿ ಹಾಗೂ ಪಿ.ಜಿ ಡಿಪ್ಲೊಮೊ ಕೋರ್ಸ್ ಗೆ ಸಂಬಂಧಿಸಿದ ಇತರೆ ವಿಷಯಗಳು. | ರೂ. 902/- |
| 09 | ಅಂಕಪಟ್ಟಿ ಶುಲ್ಕ | ರೂ. 143/- |
| ಲಿಖಿತ/ಪ್ರಾಯೋಗಿಕ ಪರೀಕ್ಷೆಗಳ ಪುನರಾವರ್ತಿತ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಬೇಕು. | | |

## :ಎಲ್ಲಾ ಮಹಾವಿದ್ಯಾಲಯಗಳ/ವಿಭಾಗಗಳ ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಗಳು ಆನ್‌ಲೈನ್ (online) ಮುಖಾಂತರ ಅರ್ಜಿ ಸಲ್ಲಿಸಲು http://student.logisys.org/vskub ನಲ್ಲಿ ಲಾಗಿನ್ ಆಗಿ ನೊಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿದ ನಂತರ ಶುಲ್ಕದ ವಿವರಗಳುಳ್ಳ ಅರ್ಜಿ ಮುದ್ರಿಸಿ ಅಂಚೆ ಕಛೇರಿಯಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ತಕ್ಷಣ ವಿದ್ಯಾರ್ಥಿಗಳು ತಮ್ಮ ವಿಭಾಗಕ್ಕೆ ಸಲ್ಲಿಸಬೇಕು.
2. ನಿಗಧಿತ ಶುಲ್ಕವನ್ನು (ಮುದ್ರಿತ ಚಲನ್ ನಲ್ಲಿರುವಂತ) ಆನ್‌ಲೈನ್ ಚಲನ್‌ನೊಂದಿಗೆ ಯಾವುದೇ ಅಂಚೆ ಕಛೇರಿಯಲ್ಲಿ ನೇರವಾಗಿ ಪಾವತಿಸುವುದು.
3. SC/ST ಹಾಗೂ OBC ವಿದ್ಯಾರ್ಥಿಗಳು (ಸರ್ಕಾರಿ ಆದೇಶಗಳನ್ವಯ ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ವಿದ್ಯಾರ್ಥಿಗಳು) ಪ್ರವರ್ಗ-01, 2ಎ, 2ಬಿ, 3ಎ, 3ಬಿ ವಿದ್ಯಾರ್ಥಿಗಳು ವಿನಾಯಿತಿ ಶುಲ್ಕವನ್ನು ಹಾಗೂ ಇತರೆ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಈ ಬಗ್ಗೆ ಎಲ್ಲಾ ಸಂಬಂಧಪಟ್ಟ ಮಹಾವಿದ್ಯಾಲಯ/ವಿಭಾಗದವರು SC/ST ಹಾಗೂ OBC ವಿದ್ಯಾರ್ಥಿಗಳ ಆದಾಯದ ವಿನಾಯಿತಿಯನ್ನು ಪರಿಗಣಿಸುವ ಮುನ್ನ ಆದಾಯ ಮಿತಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸೂಕ್ತವಾಗಿ ಪರಿಶೀಲಿಸಿ ಆದಾಯ ಮಿತಿಗೆ ಒಳಪಡುವ ವಿದ್ಯಾರ್ಥಿಗಳಿಗೆ ಮಾತ್ರ ವಿನಾಯಿತಿ ಶುಲ್ಕದ ಚಲನ್ ನ್ನು ಪರಿಗಣಿಸತಕ್ಕದ್ದು. ಆದಾಯ ಮಿತಿ ನಿಗಧಿತ ಮೊತ್ತಕ್ಕಿಂತ ಹೆಚ್ಚಿಗೆ ಇದ್ದ ಪಕ್ಷದಲ್ಲಿ, ಅಂತಹ ಚಲನ್‌ಗಳನ್ನು ಪರಿಗಣಿಸಕೂಡದೆಂದು ಈ ಮೂಲಕ ತಿಳಿಸಲಾಗಿದೆ.
4. SC/ST ಹಾಗೂ ಇನ್ನುಳಿದ OBC/LIG ವಿದ್ಯಾರ್ಥಿಗಳು (ಸರ್ಕಾರಿ ಆದೇಶಗಳ್ವಯ ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ವಿದ್ಯಾರ್ಥಿಗಳು) ರೆಗ್ಯೂಲರ್ (Freshers) ವಿದಾರ್ಥಿಗಳು ಅಂಕಪಟ್ಟಿ ಶುಲ್ಕ ರೂ.143/- ನ್ನು ಮಾತ್ರ ಪಾವತಿಸಬೇಕು. ಆದರೆ ಸದರಿ ವರ್ಗದ ಪುನರಾವರ್ತಿತ (Repeater) ವಿದ್ಯಾಥಿಗಳಿಗೆ ಶುಲ್ಕ ವಿನಾಯಿತಿ ಇರುವುದಿಲ್ಲ ಅವರು ಪೂರ್ಣ ಪರೀಕ್ಷಾ ಶುಲ್ಕವನ್ನು ಭರಿಸಬೇಕು.
5. ಸರ್ಕಾರ ನಿಗಧಿಪಡಿಸಿದ ಆದಾಯದ ಮಿತಿಯೊಳಗಿರುವ ಬರುವ SC/ST ಹಾಗೂ ಇನ್ನುಳಿದ OBC/LIG ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸರ್ಕಾರದ ಮಂಜೂರಾತಿ ಪಡೆದ ನಂತರ ಆಯಾ ಕಾಲೇಜಿನ ಪ್ರಾಂಶುಪಾಲರು/ವಿಭಾಗದ ಮುಖ್ಯಸ್ಥರು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.
6. ಪರೀಕ್ಷಾ ಶುಲ್ಕದ ಅಧಿಸೂಚನೆಯನ್ವಯ ಪರೀಕ್ಷೆಗೆ ಅರ್ಜಿಸಲ್ಲಿಸುವ ಪುನರಾವರ್ತಿತ (Repeater) ವಿದ್ಯಾರ್ಥಿಗಳು ಸೆಮಿಸ್ಟರ್‌ವಾರು ಪ್ರತ್ಯೇಕವಾಗಿ ಶಲ್ಕ ಪಾವತಿಸತಕ್ಕದ್ದು.
7. ಪರೀಕ್ಷಾ ಶುಲ್ಕ ಪಾವತಿಸುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದ ಜೊತೆಗೆ ಪೋಸ್ಟಲ್ ಚಾರ್ಜ್ ರೂ. 20 ಮತ್ತು ತೆರಿಗೆ ಜಿ.ಎಸ್.ಟಿ ರೂ. 05 ಒಟ್ಟು 25 ರೂಪಾಯಿಯನ್ನು ಪಾವತಿಸತಕ್ಕದ್ದು.
8. **ಆಂತರಿಕ ಅಂಕಗಳ ಪಟ್ಟಿಯನ್ನು ಆಯಾ ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರುಗಳಿಂದ ಪರಿಶೀಲಿಸಿ, ಧೃಡೀಕರಿಸಿ ಹಾಗೂ ಸಂಬಂಧಿಸಿದ ವಿಭಾಗಗಳ ಮಾಡರೇಷನ್ ಸಮಿತಿಯ ಮುಖ್ಯಸ್ಥರಿಂದ ಧೃಡೀಕರಿಸಿ ನಿಗಧಿತ ದಿನಾಂಕದೊಳಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಲು ಸೂಚಿಸಿದೆ**
9. ಯಾವುದೇ ಅಭ್ಯರ್ಥಿಯು ತಮ್ಮ ನೊಂದಣಿ ಸಂಖ್ಯೆ ಮತ್ತು ವಿಷಯಗಳ ಆಯ್ಕೆಗಳನ್ನು ಸರಿಯಾಗಿ ನಮೂದಿಸದಿದ್ದಲ್ಲಿ ಅಥವಾ ಬೇರೆ ನೊಂದಣಿ ಸಂಖ್ಯೆ, ಸಂಬಂಧವಲ್ಲದ ವಿಷಯಗಳನ್ನು ನಮೂದಿಸಿದರೆ ಅದಕ್ಕೆ ಅಭ್ಯರ್ಥಿಯೇ ಹೊಣೆ. ಅಂತಹ ಪ್ರಕರಣಗಳನ್ನು ವಿಶ್ವವಿದ್ಯಾಲಯವು ಸರಿಪಡಿಸಲಾಗುವುದಿಲ್ಲ.
10. **ಪರೀಕ್ಷಾ ಶುಲ್ಕವನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಗಳನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ ಮತ್ತು ಕೊನೆಯ ದಿನಾಂಕದ ನಂತರ ಬಂದಿರುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.**
11. ಪರೀಕ್ಷಾ ಶುಲ್ಕದ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸತಕ್ಕದ್ದು.

ಕುಲಸಚಿವರು (ಮೌಲ್ಯಮಾಪನ) 20/11/19
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರ ಮಾಹಿತಿಗಾಗಿ.
2. ಕುಲಸಚಿವರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರ ಮಾಹಿತಿಗಾಗಿ.
3. ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರ ಮಾಹಿತಿಗಾಗಿ.
4. ಮೆ//ಲಾಜಿಸಿಸ್ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರ ಮಾಹಿತಿಗಾಗಿ.
5. ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರ ಮಾಹಿತಿಗಾಗಿ.
6. ಪ್ರಾಂಶುಪಾಲರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಈ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಸ್ನಾತಕೋತ್ತರ ಮಹಾವಿದ್ಯಾಲಯಗಳು. ರವರ ಮಾಹಿತಿಗಾಗಿ.
7. ಕಛೇರಿ ಪ್ರತಿ.